**ಪಶು ವೈದ್ಯರನ್ನು ನಿಯೋಜಿಸುವುದು**

207 (721) ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ (ಕುಂದಗೋಳ) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕುಂದಗೋಳ ಮತಕ್ಷೇತ್ರದಲ್ಲಿ ಪಶು ಸಂಗೋಪನಾ ಇಲಾಖೆಯಲ್ಲಿ ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆಗಳ ವಿವರ ನೀಡುವುದು)

(ಆ) ಅವುಗಳಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು);

(ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ವರ್ಷಗಳಿಂದ ಖಾಲಿ ಇರುತ್ತವೆ; (ವಿವರ ನೀಡುವುದು);

(ಈ) ಅನೇಕ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಊ) ಯಾವಾಗ ಖಾಲಿ ಹುದ್ದೆಗಳನ್ನು ತುಂಬಲಾಗುವುದು;

**ಶ್ರೀ ರೇವೂನಾಯಕ್ ಬೆಳಮಗಿ** (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):–

ಕುಂದಗೋಳ ವಿಧಾನ ಸಭಾ ಕ್ಷೇತ್ರದಲ್ಲಿನ ಪಶುವೈದ್ಯಕೀಯ ಸಂಸ್ಥೆಗಳಿಗೆ ಮಂಜೂರಾದ ಹುದ್ದೆಗಳ ವಿವರ ಕೆಳಕಂಡಂತಿದೆ.

| ಕ್ರ. ಸಂ. | ವೃಂದ | ಮಂಜೂರು |
|---|---|---|
| 1 | ಸಹಾಯಕ ನಿರ್ದೇಶಕರು | 1 |
| 2 | ಪಶುವೈದ್ಯ ಅಧಿಕಾರಿ | 14 |
| 3 | ಜಾನುವಾರು ಅಧಿಕಾರಿ | 1 |
| 4 | ಹಿರಿಯ ಪಶುವೈದ್ಯ ಪರೀಕ್ಷಕರು | 6 |
| 5 | ಪಶುವೈದ್ಯ ಪರೀಕ್ಷಕರು | 19 |

| | | |
|---|---|---|
| 6 | ಪಶುವೈದ್ಯ ಸಹಾಯಕರು | 4 |
| 7 | ಲಿಪಿಕ ವರ್ಗ | 0 |
| 8 | ವಾಹನ ಚಾಲಕರು | 1 |
| 9 | ಡಿ–ದರ್ಜೆನೌಕರರು | 14 |

ಅ) ಅವುಗಳಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಈ ಕೆಳಕಂಡಂತಿದೆ:

| ಕ್ರ. ಸಂ. | ವೃಂದ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಪಶುವೈದ್ಯ ಅಧಿಕಾರಿ | 7 |
| 2 | ಜಾನುವಾರು ಅಧಿಕಾರಿ | 1 |
| 3 | ಹಿರಿಯ ಪಶುವೈದ್ಯ ಪರೀಕ್ಷಕರು | 6 |
| 4 | ಪಶುವೈದ್ಯ ಪರೀಕ್ಷಕರು | 16 |
| 5 | ಪಶುವೈದ್ಯ ಸಹಾಯಕರು | 2 |
| 6 | ವಾಹನ ಚಾಲಕರು | 1 |
| 7 | ಡಿ–ದರ್ಜೆನೌಕರರು | 25 |

ಇ) ಖಾಲಿ ಇರುವ ಹುದ್ದೆಗಳು ಮತ್ತು ಎಷ್ಟು ವರ್ಷಗಳಿಂದ ಖಾಲಿ ಇವೆ ಎಂಬುದರ ವಿವರ:

| ಕ್ರ. ಸಂ. | ವೃಂದ | ಖಾಲಿ ಹುದ್ದೆಗಳ ಸಂಖ್ಯೆ | ಎಷ್ಟು ವರ್ಷಗಳಿಂದ ಖಾಲಿ ಇರುತ್ತದೆ |
|---|---|---|---|
| 1 | ಸಹಾಯಕ ನಿರ್ದೇಶಕರು | 1 | 30–5–2012ರಿಂದ |
| 2 | ಪಶುವೈದ್ಯ ಅಧಿಕಾರಿ | 7 | 3 ವರ್ಷಗಳಿಂದ |
| 5 | ಪಶುವೈದ್ಯ ಪರೀಕ್ಷಕರು | 3 | 8 ವರ್ಷಗಳಿಂದ |
| 6 | ಪಶುವೈದ್ಯ ಸಹಾಯಕರು | 2 | 8 ವರ್ಷಗಳಿಂದ |
| 9 | ಡಿ–ದರ್ಜೆನೌಕರರು | 19 | 7 ವರ್ಷಗಳಿಂದ |

ಈ) ಬಂದಿದೆ

(ಉ)1. ಸಹಾಯಕ ನಿರ್ದೇಶಕರು:– ಪಶುವೈದ್ಯಾಧಿಕಾರಿಗಳ ವೃಂದದಿಂದ ಸಹಾಯಕ ನಿರ್ದೇಶಕರ ವೃಂದಕ್ಕೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಆದ್ಯತೆ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುವುದು. ಆದಾಗ್ಯೂ ಖಾಲಿ ಖಾಲಿ ಇರುವ ಈ ಹುದ್ದೆಗೆ ಸಹಾಯಕ ನಿರ್ದೇಶಕರೊಬ್ಬರನ್ನು ಅಧಿಕ ಪ್ರಭಾರದಲ್ಲಿಡಲು ವ್ಯವಸ್ಥೆಮಾಡಲಾಗಿದೆ.

2. ಪಶುವೈದ್ಯಾಧಿಕಾರಿಗಳು: ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ತುಂಬುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ವಿಶೇಷ ನೇಮಕಾತಿ ನಿಯಮಗಳು ರಚನೆಯಾದ ನಂತರ ಈ 7 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿಮಾಡಲು ಕ್ರಮ ವಹಿಸಲಾಗುವುದು.

3. ಪಶುವೈದ್ಯಕೀಯ ಪರೀಕ್ಷಕರು:– ಈ 3 ಖಾಲಿ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ವೃಂದದ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಆದ್ಯತೆಯ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.

4. ಪಶುವೈದ್ಯ ಸಹಾಯಕರು: ಈ 2 ಖಾಲಿ ಹುದ್ದೆಗಳನ್ನು ಡಿ– ದರ್ಜೆ ನೌಕರರ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಆಧ್ಯತೆಯ ಮೇಲೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

5. ಡಿ.–ದರ್ಜೆ– ನೌಕಕರು:– ನೇರ ನೇಮಕಾತಿ ಹಾಗೂ ಅನುಕಂಪಾರ್ಥ ಆಧಾರದ ಮೇಲೆ ಭರ್ತಿ ಮಾಡುವಾಗ ಆದ್ಯತೆ ಮೇರೆಗೆ ತುಂಬಲು ಕ್ರಮವಹಿಸಲಾಗುವುದು ಹಾಗೂ ಅವಶ್ಯವಿರುವ ಕಡೆ ಹೊರಗುತ್ತಿಗೆ ಆಧಾರದ ಮೇಲೆ ಡಿ–ದರ್ಜೆ– ನೌಕರರ ಕೆಲಸ ನಿರ್ವಹಿಸಲಾಗುವುದು

ಊ) ಮೇಲೆ ತಿಳಿಸಿರುವಂತೆ ಕ್ರಮವಹಿಸಲಾಗುವುದು.

**ಬೀದರ್ ಜಿಲ್ಲಾ ಆಸ್ಪತ್ರೆಯ ಮೂಲಭೂತ ಸೌಕರ್ಯಗಳು**

**273 (880) ಶ್ರೀ ರಹೀಂ ಖಾನ್ (ಬೀದರ್)** :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೀದರ್ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಆಸ್ಪತ್ರೆಯಲ್ಲಿ ಸಿ.ಟಿ. ಸ್ಕ್ಯಾನ್ ಹಾಗು ಇನ್ನಿತರ ಮೂಲ ಸೌಲಭ್ಯಗಳು ಇಲ್ಲಿಯ ಬಡ ರೋಗಿಗಳಿಗೆ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ವಿವರ ನೀಡುವುದು)